ಕುಣಿಯುವ ಹೆಜ್ಜೆಯೊಂದಿಗೆ ಹೊರಬಂದ ಸವಿತಾಳನ್ನು ಕಂಡು ಶಾರದಮ್ಮನಿಗೂ ಖುಷಿಯಾಗಿತ್ತು. ಸದ್ಯಕ್ಕವರು ನೆಮ್ಮದಿಯ ನಿಟ್ಟುಸಿರು ಹೊರದಬ್ಬಿದರು.

* * *

ಕಣ್ಣು ಮುಚ್ಚಿದರೂ ನಿದ್ರೆ ಅವನ ಹತ್ತಿರ ಸುಳಿಯಲೊಲ್ಲದು. ಹೊರಗಡೆ ಮಳೆ ಒಂದೇ ಸಮ ಸುರಿಯುತ್ತಿತ್ತು. ಕಣ್ಣುಬಿಟ್ಟು ಎದ್ದು ಕುಳಿತನು. ಕೋಣೆಯನ್ನು ತುಂಬಿದ್ದ ಗೌವ್ವೆನ್ನುವ ಕತ್ತಲೆಯಲ್ಲಿ ಎಲ್ಲವೂ ಕಪ್ಪು ಕಪ್ಪು... ಕಾಲನ್ನು ನೆಲಕ್ಕೆ ಬಿಟ್ಟುಕೊಂಡು ಹಾಗೇ ಹಾಸಿಗೆಯಂಚಿಗೆ ಕುಳಿತನು. ನೆನಪುಗಳು ಅವನಂತರಾತ್ಮವನ್ನು ಬಗೆಯತೊಡಗಿದವು.

'ತನ್ನದಲ್ಲದ ತಪ್ಪಿಗೆ ಬಲಿಯಾದ ಸುಲೋಚನಾ, ಸಾವಿನಲ್ಲೂ ತಪ್ಪಿತಸ್ಥೆ ಅಂತನಿಸಿಕೊಂಡು ಲೋಕನಿಂದನೆಗೊಳಗಾದಳು. ಪಾಪ ಅವಳದೇನು ತಪ್ಪಿತ್ತು?... ಹೌದು, ಅವಳು ತನ್ನನ್ನು ಮದುವೆಯಾಗಿದ್ದೇ ತಪ್ಪಾಗಿತ್ತು... ಅವಳಿಗಾದರೂ ನನ್ನ ಭಾವನೆಯ ಬಗೆಗೆ ಏನು ತಿಳಿದಿತ್ತು. ಹೊರಮೈ ಗಂಡಿನ ದೇಹರಚನೆಯನ್ನು ಹೊದ್ದುಕೊಂಡು, ನನ್ನ ಒಳಮನಸ್ಸು ಹೆಣ್ಣಾಗಿತ್ತು ಮತ್ತು ಅದು ಮತ್ತೊಬ್ಬ ಗಂಡಿಗಾಗಿ ಹಾತೊರೆಯುತ್ತಿತ್ತು ಎಂದು ಅವಳಿಗಾದರೂ ಹೇಗೆ ತಿಳಿಯಬೇಕಿತ್ತು... ಅದನ್ನು ಮುಚ್ಚಿಟ್ಟು, ಅದರ ಮೇಲ್ಮೈಗೊಂದು ಮುಖವಾಡವನ್ನು ಧರಿಸಿ, ಲೋಕದೆದುರು ತಾನೊಬ್ಬ ಗಂಡೆಂದು ಸಮರ್ಥಿಸಿಕೊಳ್ಳುವ ಸಲುವಾಗಿ ಸಂಸಾರದ ರಥವನ್ನೇರಿ, ಒಪ್ಪಿಯೂ ಒಪ್ಪಿಕೊಳ್ಳಲಾಗದೆ ಹರೆಯದ ಉತ್ತುಂಗ ಸ್ಥಿತಿಯಲ್ಲಿ ಮನಸ್ಸನ್ನು ಹೊಂದಿಸಿಕೊಳ್ಳುವ ವಿಫಲ ಪ್ರಯತ್ನದಿಂದಲೇ ದೈಹಿಕವಾಗಿ ಅವಳಲ್ಲಿ ಮಿಲನ ಹೊಂದಿ, ಅವಳು ಬಸಿರನ್ನು ಹೊತ್ತಾಗ ಒಳಗೊಳಗೇ ಲೋಕದೆದುರು ತಾನೊಬ್ಬ ಗಂಡೆಂದು ಸಾಬೀತಾಯಿತು ಎಂದು ತೃಪ್ತಿಪಟ್ಟು, ಅವಳು ಹೆಣ್ಣು ಮಗುವನ್ನು ಹೆತ್ತಾಗ ಸಂಭ್ರಮಿಸುತ್ತಾ, ನೆಂಟರು – ಗೆಳೆಯರೆಲ್ಲರಿಗೂ ಸಿಹಿಯನ್ನು ಹಂಚಿ ಮೆರೆದಾಡಿದ್ದು ಈಗಲೂ ನೆನಪಿದೆ. ಆದರೆ ಅದರ ನಂತರದ್ದು?...' ಕರುಣಾಕರ ಕುಳಿತಲ್ಲಿಯೇ ಒಂದು ದೀರ್ಘವಾದ ನಿಟ್ಟುಸಿರು ದಬ್ಬಿದನು.

'ಹೊರಜಗತ್ತಿಗೆ ನಾನು ಗಂಡೆಂದು ಸಮರ್ಥಿಸಿಕೊಂಡು ಸಾಧಿಸಿದ್ದಾದರೂ ಏನು?... ಒಳಗೆ ನಾನೊಬ್ಬಳು ಹೆಣ್ಣು, ಜೀವಮಾನವಿಡೀ ನನ್ನ ಜೊತೆಗೇ ಬಾಳಿ ಬದುಕಬೇಕಿರುವ ಅವಳೆದುರು ನಾನು ಎಷ್ಟು ದಿನಗಳವರೆಗೆ ನಾಟಕವಾಡಿಯೇನು... ಒಂದಲ್ಲ ಒಂದು ದಿನವಾದರೂ ಮುಖವಾಡ ಕಳಚಿ ಬೀಳಲೇಬೇಕಲ್ಲವೆ?... ಹೌದು!... ಆವಾಗ ನಾನಿನ್ನೂ ನಾಟಕದಲ್ಲಿ ಸ್ತ್ರೀಪಾತ್ರವನ್ನು ಮಾಡುತ್ತಾ ನನ್ನ ಮನಸ್ಸಿನ ಆಸೆ, ಆಕಾಂಕ್ಷೆಗಳನ್ನು ಅದರಲ್ಲಿಯೇ ಪೂರೈಸಿಕೊಳ್ಳುತ್ತಿದ್ದ ದಿನಗಳು. ಪ್ರೀತಿಗಲ್ಲದಿದ್ದರೂ ಕಾಮದ ತೃಷೆಗಾಗಿ ಯುವಕರು ನನ್ನ ಹಿಂದೆ ಬಿದ್ದಿದ್ದ ಕಾಲ. ಖುಷಿ ಆಗ ಎರಡೂವರೆ ಮೂರು ವರ್ಷದ ಪುಟ್ಟ ಕಂದ. ನನಗೋ ಮದುವೆಯಾಗಿ ಒಂದು ಮಗುವಾಗಿದ್ದಾಯಿತು, ಇನ್ನೇನು ಪರವಾಗಿಲ್ಲ' ಅನ್ನುವ ಅಸಡ್ಡೆ. ಹೆಣ್ಣಾಗಿ ಅವಳು ಗಂಡನೇ ಸನಿಹಕ್ಕೆ ಬರಲಿ ಎಂದು ಹಂಬಲಿಸಿದ್ದರೂ ನನಗೆ ಆಸಕ್ತಿಯಿಲ್ಲ. ಕೊನೆಗೆ ಹೆಣ್ಣಾಗಿ ಸುಲೋಚನಾಳೆ ಮುಂದುವರೆದಳಾದರೂ, ನಾನವಳನ್ನು ತೃಪ್ತಿಪಡಿಸಲಾರದವನಾಗಿದ್ದೆ. ಅಲ್ಲಿಂದಲೇ ಅವಳಿಗೆ ಅನುಮಾನ ಶುರುವಾಗಿದ್ದು!... ಒಂದು ಬಾರಿಯಂತೂ ಅವಳು,

'ಹೊರಗಡೆ ಬೇರೆ ಹುಡುಗಿಯ ಸಂಪರ್ಕವಿಟ್ಟುಕೊಂಡಿದ್ದೀರಾ ಹೇಗೆ?' ಎಂದು ನೇರವಾಗಿಯೇ ಕೇಳಿದ್ದಳು. ನಾನಾಕ್ಷಣ ತಲ್ಲಣಿಸಿದ್ದೆ.

'ಹುಡುಗಿಯರಲ್ಲ, ಹುಡುಗರ ಸಂಪರ್ಕ'ವೆಂದು ನಾನಾದರೂ ಹೇಗೆ ಹೇಳಿಯೇನು. ಆದರೆ ನನಗಿರೋದು ಹುಡುಗರ ಸಂಪರ್ಕವೆಂದು ತಿಳಿಯಲು ಅವಳಿಗೆ ಹೆಚ್ಚು ಸಮಯ ಬೇಕಾಗಲೇ ಇಲ್ಲ. ಗಂಡ ಹೆಚ್ಚು ಪ್ರಣಯದಲ್ಲಿ ತೊಡಗುತ್ತಿಲ್ಲವೆಂದಾಗಲೇ ಸುಲೋಚನಾ ನನ್ನ ಮೇಲೊಂದು ಕಣ್ಣಿಟ್ಟಾಗಿತ್ತು. ಅವಳು ನನ್ನ ಚಲನವಲನವನ್ನೆಲ್ಲಾ ತುಂಬಾ ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದಿದ್ದು, ನನ್ನ ಅರಿವಿಗೆ ಬಂದಿರಲಿಲ್ಲ. ನನ್ನ ಮೊಬೈಲ್‌ನ ಪಾಸ್‌ವರ್ಡ್ ಪತ್ತೆಹಚ್ಚಿಕೊಂಡ ಅವಳು, ವಾಟ್ಸಾಪ್ ಚ್ಯಾಟ್‌ನಲ್ಲಿದ್ದ ನನ್ನ ಹಾಗೂ ದಿನಕರನ ಮೆಸೇಜ್‌ನಿಂದಲೇ ಎಲ್ಲವನ್ನೂ ತಿಳಿದುಕೊಂಡಿದ್ದಳು. ಆ ರಾತ್ರಿ ನಾನು ನಾಟಕದ ವಿಚಾರವಾಗಿಯೇ ಅವಳಲ್ಲಿ ಏನೋ ಹೇಳುತ್ತಿರಬೇಕಾದರೆ ಅವಳು ನನ್ನಲ್ಲಿ ನೇರವಾಗಿ,

'ನೀವುನಾಟಕದಲ್ಲಿಹುಡುಗಿಪಾತ್ರಮಾಡುವುದಲ್ಲದೆ ನಿಮ್ಮ ಗೆಳೆಯ ದಿನಕರನಿಗೆ ಹುಡುಗಿಯಾಗಿ ದೈಹಿಕ ಸುಖವನ್ನೂ ನೀಡುತ್ತೀರಿ ಅಲ್ವಾ?'ಎಂದು ಕೇಳಿದಾಗ